ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 17-03-1991.

# *ಸಂತುಷ್ಟ ಮಣಿಯ ಶ್ರೇಷ್ಠ ಆಸನದ ಮೇಲೆ ಆಸೀನರಾಗಲು ಪ್ರಸನ್ನ ಚಿತ್ತರಾಗಿ, ನಿಶ್ಚಿಂತ ಆತ್ಮರಾಗಿ ತಯಾರಾಗಿರಿ.*

(सन्तुष्टमणि के श्रेष्ठ आसन पर आसीन होने के लिए प्रसन्नचित्त, निश्चिंत आत्मा बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾರವರು ತನ್ನ ನಾಲ್ಕಾರು ಕಡೆಯ ಸಂತುಷ್ಟ ಮಣಿಗಳನ್ನು ನೋಡುತ್ತಿದ್ದಾರೆ. ಸಂಗಮಯುಗವೇ ಸಂತುಷ್ಟವಾಗಿರುವುದು ಮತ್ತು ಸಂತುಷ್ಟರನ್ನಾಗಿ ಮಾಡುವಂತಹ ಯುಗವಾಗಿದೆ. ಬ್ರಾಹ್ಮಣಜೀವನದ ವಿಶೇಷತೆ ಸಂತುಷ್ಟತೆಯಾಗಿದೆ. ಸಂತುಷ್ಟತೆ ಎಲ್ಲದಕ್ಕಿಂತ ದೊಡ್ಡ ಖಜಾನೆಯಾಗಿದೆ. ಸಂತುಷ್ಟತೆಯೇ ಬ್ರಾಹ್ಮಣ ಜೀವನದ ಪವಿತ್ರತೆಯ ವ್ಯಕ್ತಿತ್ವವಾಗಿದೆ. ಈ ವ್ಯಕ್ತಿತ್ವದಿಂದ ಸಹಜವಾಗಿ ವಿಶೇಷ ಆತ್ಮರಾಗಿಬಿಡುತ್ತಾರೆ. ಸಂತುಷ್ಟತೆಯ ವ್ಯಕ್ತಿತ್ವವಿಲ್ಲವೆಂದರೆ ವಿಶೇಷ ಆತ್ಮ ಎಂದು ಹೇಳಲು ಸಾಧ್ಯವಿಲ್ಲ. ಈಗಿನ ಕಾಲದಲ್ಲಿ ಎರಡು ಪ್ರಕಾರದ ವ್ಯಕ್ತಿತ್ವಗಳ(ಪರ್ಸನಾಲಿಟಿ) ಗಾಯನ ಮಾಡಲಾಗುತ್ತದೆ. ಒಂದಾಗಿದೆ ಶಾರೀರಿಕ ವ್ಯಕ್ತಿತ್ವ, ಇನ್ನೊಂದು ಪದವಿ(ಸ್ಥಿತಿ)ಯ ವ್ಯಕ್ತಿತ್ವವಾಗಿದೆ. ಬ್ರಾಹ್ಮಣ ಜೀವನದಲ್ಲಿ ಯಾವ ಬ್ರಾಹ್ಮಣ ಆತ್ಮನಲ್ಲಿ ಸಂತುಷ್ಟತೆಯ ಮಹಾನತೆ ಇರುತ್ತದೆಯೋ ಅವರ ಮುಖದಲ್ಲಿ, ಅವರ ಚೆಹರೆಯಲ್ಲೂ ಸಹ ಸಂತುಷ್ಟತೆಯ ವ್ಯಕ್ತಿತ್ವ ಕಂಡುಬರುತ್ತದೆ ಮತ್ತು ಶ್ರೇಷ್ಠ ಸ್ಥಿತಿಯ ವ್ಯಕ್ತಿತ್ವ ಕಂಡುಬರುತ್ತದೆ. ಸಂತುಷ್ಟತೆಯ ಆಧಾರ ತಂದೆಯ ಮುಖಾಂತರ ಪ್ರಾಪ್ತಿಯಾಗಿರುವ ಸರ್ವ ಪ್ರಾಪ್ತಿಗಳಿಂದ ಭರ್‌ಪೂರ್ ಅರ್ಥಾತ್ ಸಂತುಷ್ಟತೆ. ಅಸಂತುಷ್ಟತೆಗೆ ಕಾರಣ ಅಪ್ರಾಪ್ತಿಯಾಗಿದೆ. ಸಂತುಷ್ಟತೆ ಕಾರಣ ಸರ್ವಪ್ರಾಪ್ತಿಗಳು. ಆದ್ದರಿಂದ ಬಾಪ್‌ದಾದಾರವರು ತಾವೆಲ್ಲಾ ಬ್ರಾಹ್ಮಣ ಮಕ್ಕಳಿಗೆ ಬ್ರಾಹ್ಮಣ ಜನ್ಮ ಪಡೆದ ತಕ್ಷಣ ಪೂರ್ತಿ ಆಸ್ತಿ(ವಾರಸತ್ವ)ಯನ್ನು ಕೊಟ್ಟುಬಿಟ್ಟಿದ್ದಾರಲ್ಲವೇ, ಅಥವಾ ಕೆಲವರಿಗೆ ಸ್ವಲ್ಪ, ಕೆಲವರಿಗೆ ಅಧಿಕ ಕೊಟ್ಟಿದ್ದಾರೆಯೇ? ಬಾಪ್‌ದಾದಾರವರು ಸದಾ ಮಕ್ಕಳಿಗೆ ತಂದೆ

ಮತ್ತು ವಾರಸತ್ವವನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ವಾರಸತ್ವ ಎಂದರೆ ಸರ್ವ ಪ್ರಾಪ್ತಿಗಳು. ಇದರಲ್ಲಿ ಸರ್ವಶಕ್ತಿಗಳು, ಸರ್ವಗುಣಗಳು, ಜ್ಞಾನವೂ ಸಹ ಬಂದುಬಿಡುತ್ತದೆ. ಕೇವಲ ಜ್ಞಾನ ಅಲ್ಲ, ಸಂಪೂರ್ಣ ಜ್ಞಾನ. ಕೇವಲ ಶಕ್ತಿಗಳು. ಮತ್ತು ಗುಣಗಳು ಅಲ್ಲ ಆದರೆ ಸರ್ವ ಗುಣಗಳು ಮತ್ತು ಸರ್ವ ಶಕ್ತಿಗಳು ಆಗ ಸಂಪನ್ನತೆಯ ವಾರಸತ್ವ ಸಿಗುತ್ತದೆ. ಯಾವುದೇ ಕೊರತೆ ಇರುವುದಿಲ್ಲ. ಸರ್ವ ಬ್ರಾಹ್ಮಣ ಮಕ್ಕಳಿಗೆ ಪೂರ್ತಿ ಆಸ್ತಿ ಸಿಗುತ್ತದೆ. ಅರ್ಧ ಸಿಗುವುದಿಲ್ಲ. ಸರ್ವ ಗುಣಗಳಲ್ಲಿ ಎರಡು ಗುಣಗಳು ನಿಮಗೆ, ಎರಡು ಗುಣಗಳು ಇವರಿಗೆ. ಈ ರೀತಿ ಕೊಟ್ಟಿರಲಿಲ್ಲ. ಪೂರ್ತಿ ಆಸ್ತಿ ಅರ್ಥಾತ್ ಸಂಪನ್ನತೆ. ಸಂಪೂರ್ಣತೆ. ಯಾವುದೂ ಕಡಿಮೆ ಇಲ್ಲ. ಯಾವಾಗ ಪ್ರತಿಯೊಬ್ಬರಿಗೆ ಪೂರ್ತಿ ಆಸ್ತಿ ಸಿಗುತ್ತದೆ ಅಂದಾಗ ಎಲ್ಲಿ ಸರ್ವ ಪ್ರಾಪ್ತಿಗಳು ಇರುತ್ತದೆಯೋ ಅಲ್ಲಿ ಸಂತುಷ್ಟತೆ ಇರುತ್ತದೆ. ಬಾಪ್‌ದಾದಾರವರು ಸರ್ವ ಬ್ರಾಹ್ಮಣರ ಸಂತುಷ್ಟತೆಯ ವ್ಯಕ್ತಿತ್ವ ಎಷ್ಟಿದೆ ಎಂದು ನೋಡುತ್ತಿದ್ದಾರೆ. ಬ್ರಾಹ್ಮಣ ಜೀವನದಲ್ಲಿ ಅಸಂತುಷ್ಟತೆಯ ಹೆಸರು-ಗುರುತೇ ಇಲ್ಲ. ಈ ವ್ಯಕ್ತಿತ್ವದಲ್ಲಿಯೇ ಬ್ರಾಹ್ಮಣ ಜೀವನದ ಮಜಾ ಇದೆ ಇದೇ ಮಜಾದ ಜೀವನ, ಮೋಜಿನ ಜೀವನವಾಗಿದೆ.

ತಪಸ್ಸು ಅರ್ಥಾಥ್ ಸಂತುಷ್ಟತೆಯ ವ್ಯಕ್ತಿತ್ವ ನಯನಗಳಲ್ಲಿ, ಚೆಹರೆಯಲ್ಲಿ, ಚಲನೆಯಲ್ಲಿ ಕಂಡುಬರಬೇಕು. ಅಂತಹ ಸಂತುಷ್ಟಮಣಿಗಳ ಮಾಲೆ ತಯಾರಾಗುತ್ತಿದೆ. ಎಷ್ಟು ಮಾಲೆ ಆಗಿರಬಹುದು? ಸಂತುಷ್ಟ ಮಣಿ ಅರ್ಥಾತ್ ಮಚ್ಚೆ ಇಲ್ಲದ ಮಣಿ. ಸಂತುಷ್ಟ ಆತ್ಮ ಸ್ವಯಂ ಸಹ ಸದಾ ಪ್ರಸನ್ನಚಿತ್ತವಾಗಿ ಅನುಭವ ಮಾಡಿಕೊಳ್ಳುತ್ತದೆ ಮತ್ತು ಇತರರು ಕೂಡ ಪ್ರಸನ್ನವಾಗಿರುತ್ತಾರೆ ಇದೇ ಸಂತುಷ್ಟತೆಯ ಚಿಹ್ನೆಯಾಗಿದೆ. ಪ್ರಸನ್ನಚಿತ್ತ ಸ್ಥಿತಿಯಲ್ಲಿ ಪ್ರಶ್ನಚಿತ್ತತೆ ಇರುವುದಿಲ್ಲ. ಒಂದಾಗಿದೆ ಪ್ರರ್ಸನ್ನಚಿತ್ತ, ಇನ್ನೊಂದಾಗಿದೆ ಪ್ರಶ್ನಚಿತ್ತ. ಪ್ರಸನ್ನಚಿತ್ತ ಆತ್ಮರು ಡ್ರಾಮಾದ ನಾಲೇಡ್ಜ್ ಫುಲ್ (ಜ್ಞಾನವಂತ) ಆಗಿರುವ ಕಾರಣ ಪ್ರಸನ್ನವಾಗಿರುತ್ತಾರೆ. ಪ್ರಶ್ನೆ ಮಾಡುವುದಿಲ್ಲ. ಯಾವುದೇ ಪ್ರಶ್ನೆ ತಮ್ಮ ಪ್ರತಿ ಅಥವಾ ಯಾರ ಪ್ರತಿಯಾದರೂ ಬರುತ್ತದೆಂದರೆ ಅದಕ್ಕೆ ಉತ್ತರ ಮೊದಲು ಸ್ವಯಂನಲ್ಲಿ ಬರುತ್ತದೆ. ಏನು ಮತ್ತು ಏಕೆ ಎನ್ನುವುದಿರಬಾರದು ಆದರೆ ಬಿಂದು (ಡಾಟ್) ಇಡಬೇಕೆಂದು ಮೊದಲೂ ಸಹ ತಿಳಿಸಲಾಗಿದೆ. ಒಂದು ಸೆಕೆಂಡಿನಲ್ಲಿ ಸಾರ. ಒಂದು ಸೆಕೆಂಡಿನಲ್ಲಿ ವಿಸ್ತಾರ ಈ ರೀತಿ ಪ್ರಸನ್ನಚಿತ್ತರು ಸದಾ ಸಂತುಷ್ಟವಾಗಿರುತ್ತಾರೆ. ಅಂದಾಗ ಇಂತಹ ಚಿಹ್ನೆಗಳು ಸಂತುಷ್ಟಮಣಿಯಾದ ನನ್ನಲ್ಲಿ ಇದೆಯೇ? ಎಂದು ಪರಿಶೀಲನೆ ಮಾಡಿಕೊಳ್ಳಿ. ಬಾಪ್‌ದಾದಾರವರಂತೂ ಎಲ್ಲರಿಗೂ ಸಂತುಷ್ಟ ಮಣಿಯ ಟೈಟಿಲ್ (ಬಿರುದು) ನ್ನು ಕೊಟ್ಟಿದ್ದಾರೆ. ಅಂದಾಗ ಬಾಪ್‌ದಾದಾರವರು ಹೇ ಸಂತುಷ್ಟಮಣಿಗಳೇ ಸದಾ ಸಂತುಷ್ಟವಾಗಿದ್ದೀರಾ? ಎಂದು ಕೇಳುತ್ತಿದ್ದಾರೆ. ಇನ್ನೊಂದು ಪ್ರಶ್ನೆ ಸ್ವಯಂನಲ್ಲಿ ಅರ್ಥಾತ್ ಸ್ವಯಂನ ಪುರುಷಾರ್ಥದಿಂದ, ಸ್ವಯಂನ ಸಂಸ್ಕಾರ ಪರಿವರ್ತನೆಯ ಪುರುಷಾರ್ಥದಿಂದ, ಸ್ವಯಂನ ಪುರುಷಾರ್ಥದ ಪರ್ಸೆಂಟೇಜಿನಲ್ಲಿ, ಸ್ಥಿತಿಯಲ್ಲಿ ಸಂತುಷ್ಟವಾಗಿದ್ದೀರಾ? ಒಳ್ಳೆಯದು. ಎರಡನೆಯ ಪ್ರಶ್ನೆ - ಸ್ವಯಂನ ಮನಸಾ, ವಾಚಾ, ಕರ್ಮ್ಮಣಾ ಅರ್ಥಾತ್ ಸಂಬಂಧ-ಸಂಪರ್ಕದ ಮುಖಾಂತರ ಸೇವೆಯಲ್ಲಿ ಸದಾ ಸಂತುಷ್ಟವಾಗಿದ್ದೀರಾ? ಮೂರೂ ಸೇವೆಗಳು, ಕೇವಲ ಒಂದು ಸೇವೆಯಲ್ಲಿ ಅಲ್ಲ. ಮೂರೂ ಸೇವೆಯಲ್ಲಿ ಸದಾ ಸಂತುಷ್ಟವಾಗಿದ್ದೀರಾ? ನಾನು ಎಲ್ಲಿಯ ತನಕ ಸಂತುಷ್ಟವಾಗಿದ್ದೇನೆ ಎನ್ನುವುದು ನೋಡಿಕೊಳ್ಳುತ್ತಿದ್ದೀರಾ. ಯೋಚನೆ ಮಾಡುತ್ತಿದ್ದೀರಾ? ಒಳ್ಳೆಯದು ಮೂರನೇ ಪ್ರಶ್ನೆಯಾಗಿದೆ - ಸರ್ವ ಆತ್ಮರ ಸಂಬಂಧ-ಸಂಪರ್ಕದಲ್ಲಿ ಸ್ವಯಂನ ಮುಖಾಂತರ ಅಥವಾ ಸರ್ವರ ಮುಖಾಂತರ ಸದಾ ಸಂತುಷ್ಟವಾಗಿದ್ದೀರಾ? ಏಕೆಂದರೆ ತಪಸ್ಯಾ ವರ್ಷದಲ್ಲಿ ತಪಸ್ಸಿನ ಸಫಲತೆಯ ಫಲ ಇದನ್ನೆ ಪ್ರಾಪ್ತಿ ಮಾಡಿಕೊಳ್ಳುವುದು. ಸ್ವಯಂನಿಂದ, ಸೇವೆಯಿಂದ ಮತ್ತು ಸರ್ವರಿಂದ ಸಂತುಷ್ಟತೆ ಇರಬೇಕು. ನಾಲ್ಕು ಗಂಟೆ ಯೋಗ ಮಾಡುತ್ತಿದ್ದೀರಾ ಒಳ್ಳೆಯದು, 4 ಗಂಟೆಯಿಂದ 8 ಗಂಟೆವರೆಗೆ ತಲುಪಿಬಿಡುತ್ತೀರಿ. ಇದೂ ಸಹ ಬಹಳ ಒಳ್ಳೆಯದು. ಯೋಗದ ಸಿದ್ಧಿ ಸ್ವರೂಪರಾಗಿದ್ದೀರಾ? ಯೋಗವು ವಿಧಿಯಾಗಿದೆ. ಆದರೆ ಈ ವಿಧಿಯಿಂದ ಏನು ಸಿದ್ಧಿ ಸಿಗುತ್ತದೆ? ಯೋಗವನ್ನು ಜೋಡಿಸುವುದು. ಇದು ವಿಧಿಯಾಗಿದೆ. ಯೋಗದ ಪ್ರಾಪ್ತಿ ಇದು ಸಿದ್ಧಿಯಾಗಿದೆ. ಆದ್ದರಿಂದ ಹೇಗೆ 8 ಗಂಟೆ ಯೋಗದ ಲಕ್ಷ್ಯವನ್ನು ಇಟ್ಟುಕೊಂಡಿರುವಿರೋ ಹಾಗೆಯೇ, ಕಡಿಮೆ ಪಕ್ಷ ಮೂರೂ ಪ್ರಕಾರದ ಸಂತುಷ್ಟತೆಯಯ ಶ್ರೇಷ್ಠ ಲಕ್ಷ್ಯವಿಟ್ಟುಕೊಳ್ಳಿ. ಕೆಲವು ಮಕ್ಕಳು ಸ್ವಯಂ ಅಮಾಯಕರಾಗಿ (ನನಗೆ ಎಲ್ಲಾ ಗೊತ್ತಿದೆ) ಸಂತುಷ್ಟರೆಂದು ತಿಳಿದುಕೊಳ್ಳುತ್ತಾರೆ. ಈ ರೀತಿ ಆಗಬಾರದು. ಒಂದಾಗಿಗೆ ಹೃದಯದಿಂದ ತಿಳಿದುಕೊಳ್ಳುವುದು. ಇನ್ನೊಂದು ಬುದ್ಧಿಯಿಂದ

ತಿಳಿದುಕೊಳ್ಳುವುದು. ಬುದ್ಧಿಯಿಂದ ತಿಳಿದುಕೊಳ್ಳುತ್ತಾರೆ ನಾನು ಸಂತುಷ್ಟವಾಗಿಯೇ ಇದ್ದೇನೆ. ನನಗಾವ ಚಿಂತೆ ಇಲ್ಲ. ನಿಶ್ಚಿಂತವಾಗಿ ಇದ್ದೇನೆ ಆದರೆ ಬುದ್ಧಿಯಿಂದ ಸ್ವಯಂ ಅನ್ನು ಸಂತುಷ್ಟವಾಗಿ ಭಾವಿಸುವುದನ್ನು ಸಂತುಷ್ಟತೆ ಎನ್ನಲಾಗುವುದಿಲ್ಲ. ಯಥಾರ್ಥವಾಗಿ ತಿಳಿದುಕೊಳ್ಳಬೇಕು. ಸಂತುಷ್ಟತೆಯ ಚಿಹ್ನೆಗಳು ಸ್ವಯಂನಲ್ಲಿ ಅನುಭವ ಆಗಬೇಕು. ಮನಸ್ಸು ಸದಾ ಪ್ರಸನ್ನವಾಗಿರಬೇಕು, ವ್ಯಕ್ತಿತ್ವ ಇರಬೇಕು. ಸ್ವಯಂನ್ನು ವ್ಯಕ್ತಿತ್ವದಲ್ಲಿರುವ ಹಾಗೆ ಭಾವಿಸುತ್ತಿದ್ದಾರೆ ಆದರೆ ಇತರರು ಭಾವಿಸುವುದಿಲ್ಲ ಇದಕ್ಕೆ ಮಿಯಾ ಮಿಟ್ಟು (ಎಲ್ಲಾ ಗೊತ್ತಿದೆ ಎನ್ನುವ ಅಹಂಕಾರಿ,ಅಮಾಯಕತ್ವ) ಎಂದು ಕರೆಯಲಾಗುತ್ತದೆ. ಈ ರೀತಿ ಸಂತುಷ್ಟವಲ್ಲ. ಆದರೆ ಯಥಾರ್ಥ ಅನುಭವದ ಮುಖಾಂತರ ಸಂತುಷ್ಟ ಆತ್ಮರಾಗಿ. ಸಂತುಷ್ಟತೆ ಅರ್ಥಾತ್ ಮನಸ್ಸು-ಬುದ್ಧಿ ಸದಾ ವಿಶ್ರಾಂತಿಯಿಂದ ಇರುವುದು, ಸುಖದ ಸ್ಥಿತಿಯಲ್ಲಿ ಇರುವುದು. ದುಃಖದಲ್ಲಿ ಇರುವುದಿಲ್ಲ. ಅಂತಹ ಸಂತುಷ್ಟ ಮಣಿಗಳು ತಂದೆಯ ಮಸ್ತಕದ ಮಣಿಗಳ ಸಮಾನ ಸದಾ ಹೊಳೆಯುತ್ತಿರುತ್ತಾರೆ. ಆದ್ದರಿಂದ ಸ್ವಯಂನ್ನು ಪರಿಶೀಲನೆ ಮಾಡಿಕೊಳ್ಳಿ. ಸಂತುಷ್ಟತೆ ತಂದೆಯಿಂದ ಮತ್ತು ಸರ್ವರಿಂದ ಆಶೀರ್ವಾದಗಳನ್ನು ಕೊಡಿಸುತ್ತದೆ. ಸಂತುಷ್ಟ ಆತ್ಮಯಸಮಯ ಪ್ರತಿ ಸಮಯ ತಂದೆ ಮತ್ತು ಸರ್ವರ ಆಶೀರ್ವಾದಗಳ ವಿಮಾನದಲ್ಲಿ ಹಾರುವಂತಹ ಅನುಭವವನ್ನು ಮಾಡುತ್ತದೆ. ಈ ಆಶೀರ್ವಾದಗಳೇ ಅವರಿಗೆ ವಿಮಾನವಾಗಿದೆ. ಸದಾ ಸ್ವಯಂ ವಿಮಾನದಲ್ಲಿ ಹಾರುವ ಹಾಗೆ ಅನುಭವವಾಗುತ್ತದೆ. ಆಶೀರ್ವಾದಗಳು ಬೇಡುವುದಲ್ಲ, ಆದರೆ ಆಶೀರ್ವಾದಗಳು ಸ್ವಯಂ ಅವರ ಮುಂದೆ ಸ್ವತಹವಾಗಿ ಬಂದುಬಿಡುತ್ತದೆ ಅಂತಹ ಸಂತುಷ್ಟ ಮಣಿ ಅರ್ಥಾತ್ ಸಿದ್ಧಿ ಸ್ವರೂಪ ತಪಸ್ವಿ, ಅಲ್ಪಕಾಲದ ಸಿದ್ಧಿಗಳು ಅಲ್ಲ ಇದು ಅವಿನಾಶಿ ಮತ್ತು ಅತ್ಮಿಕ ಸಿದ್ಧಿಗಳು. ಇಂತಹ ಸಂತುಷ್ಟ ಮಣಿಗಳನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬರು ತಮ್ಮನ್ನು ತಾವೇ ನಾನು ಯಾರು? ಎಂದು ಕೇಳಿಕೊಳ್ಳಿ.

ತಪಸ್ಯಾ ವರ್ಷದ ಉಮ್ಮಂಗ-ಉತ್ಸಾಹ ಚೆನ್ನಾಗಿದೆ. ಪ್ರತಿಯೊಬ್ಬರೂ ಯಥಾಶಕ್ತಿ ಅನುಸಾರವಾಗಿ ಮಾಡುತ್ತಿದ್ದಾರೆ. ಈ ಉತ್ಸಾಹ ಬಹಳ ಚೆನ್ನಾಗಿದೆ. ಈಗ ತಪಸ್ಸಿನ ಮೂಲಕ ಪ್ರಾಪ್ತಿಗಳನ್ನು ಸ್ವಯಂ ತಮ್ಮ ಜೀವನದಲ್ಲಿ ಮತ್ತು ಸರ್ವರ ಸಂಬಂಧ-ಸಂಪರ್ಕದಲ್ಲಿ ಪ್ರತ್ಯಕ್ಷ ಮಾಡಿ. ತಮಗೆ ತಾವೇ ಅನುಭವ ಮಾಡುತ್ತೀರಿ ಆದರೆ ಅನುಭವವನ್ನು ಕೇವಲ ಮನಸ್ಸು-ಬುದ್ಧಿಯಿಂದ ಮಾಡಿದ್ದೀರಿ. ಆ ಅನುಭವವನ್ನು ಇಲ್ಲಿಯವರೆಗೇ ಇಟ್ಟುಕೊಳ್ಳಬೇಡಿ. ಆ ಅನುಭವವನ್ನು ನಡವಳಿಕೆ, ಚೆಹರೆ, ಸಂಬಂಧ-ಸಂಪರ್ಕದಲ್ಲಿ ತರಬೇಕು. ಆಗ ಮೊದಲು ಸ್ವಯಂನಲ್ಲಿ ಪ್ರತ್ಯಕ್ಷ ಆಗುತ್ತದೆ. ನಂತರ ಸಂಬಂಧದಲ್ಲಿ ಪ್ರತ್ಯಕ್ಷ ಆಗುತ್ತದೆ. ಮತ್ತೆ ವಿಶ್ವದ ಸ್ಟೇಜಿನ ಮೇಲೆ ಪ್ರತ್ಯಕ್ಷವಾಗುತ್ತದೆ. ಆಗ ಪ್ರತ್ಯಕ್ಷತೆಯ ನಗಾರಿ ಮೊಳಗುತ್ತದೆ. ಶಂಕರ ಮೂರನೇ ನೇತ್ರವನ್ನು ತೆರೆದಾಗ ವಿನಾಶವಾಗಿಬಿಡುತ್ತದೆ ಎಂದು ನಿಮ್ಮ ಸ್ಮೃತಿ ಚಿಹ್ನೆಯ ಶಾಸ್ತ್ರದಲ್ಲಿಯೂ ಹೇಳುತ್ತಾರೆಲ್ಲವೇ. ಅಂದಾಗ ಶಂಕರ ಅರ್ಥಾತ್ ಅಶರೀರಿ ತಪಸ್ವಿ ರೂಪವಾಗಿದೆ. ವಿಕಾರಿ ರೂಪಿ ಹಾವನ್ನು ಕೊರಳಿನ ಹಾರವನ್ನಾಗಿ ಮಾಡಿಬಿಟ್ಟರು. ಸದಾ ಶ್ರೇಷ್ಠ ಸ್ಥಿತಿ ಮತ್ತು ಶ್ರೇಷ್ಠ ಆಸನಧಾರಿಗಳು. ಇದು ಮೂರನೇ ಕಣ್ಣು ಅರ್ಥಾತ್ ಸಂಪೂರ್ಣತೆಯ ಕಣ್ಣು. ಸಂಪನ್ನತೆಯ ಕಣ್ಣು. **ಯಾವಾಗ ತಾವು ತಪಸ್ಸಿನಲ್ಲಿ ಸಂಪನ್ನರು, ಸಂಪೂರ್ಣ ಸ್ಥಿತಿಯಿಂದ ವಿಶ್ವ ಪರಿವರ್ತನೆಯ ಸಂಕಲ್ಪ ಮಾಡಿದ್ದೇ ಆದರೆ ಈ ಪ್ರಕೃತಿಯೂ ಸಹ ಸಂಪೂರ್ಣ ಏರು-ಪೇರು ನರ್ತನೆಯನ್ನು ಮಾಡುತ್ತದೆ. ಉಪದ್ರವ ತರುವಂತಹ ನರ್ತನೆ ಮಾಡುತ್ತದೆ. ತಾವು ಅಚಲವಾಗಿರುತ್ತೀರಿ. ಪ್ರಕೃತಿ ಉಪದ್ರವವಾಗುತ್ತಿರುತ್ತದೆ ಏಕೆಂದರೆ ಇಷ್ಟು ದೊಡ್ಡ ವಿಶ್ವದ ಸ್ವಚ್ಛತೆಯನ್ನು ಯಾರು ಮಾಡುತ್ತಾರೆ? ಮನುಷ್ಯಾತ್ಮರು ಮಾಡಲು ಸಾಧ್ಯತೆ ಇದೆಯೇ? ಈ ಗಾಳಿ, ಭೂಮಿ, ಸಮುದ್ರ, ನೀರು-ಇವುಗಳ ಏರು-ಪೇರಿನಿಂದ ಸ್ವಚ್ಛತೆಯಾಗುತ್ತದೆ. ಅಂದಾಗ ಇಂತಹ ಸಂಪೂರ್ಣತೆಯ ಸ್ಥಿತಿಯನ್ನು ಈ ತಪಸ್ಸಿನಿಂದ ಮಾಡಿಕೊಳ್ಳಬೇಕು. ಯಾವಾಗ ತಾವು ತನ್ನ ಸ್ವಯಂನ ಸದಾ ಕಾಲದ ಸಹಯೋಗಿಯಾದ ಕರ್ಮೇಂದ್ರಿಯಗಳು ಮನಸ್ಸು-ಬುದ್ಧಿ-ಸಂಸ್ಕಾರ ತಮ್ಮ ಆದೇಶವನ್ನು ಅಂಗೀಕರಿಸುತ್ತವೆಯೋ ಆಗ ಪ್ರಕೃತಿಯೂ ಸಹ ತಮ್ಮ ಸಂಕಲ್ಪದ ಆದೇಶವನ್ನು ಅಂಗೀಕರಿಸುತ್ತದೆ. ಒಂದುವೇಳೆ ಸ್ವಯಂನ ಸದಾ ಸಹಯೋಗಿ ಕರ್ಮೇಂದ್ರಿಯಗಳು ನಿಮ್ಮ ಆದೇಶವನ್ನು ಅಂಗೀಕರಿಸದಿದ್ದಾಗ ಪ್ರಕೃತಿ ನಿಮ್ಮ ಆದೇಶವನ್ನು ಹೇಗೆ ಅಂಗೀಕರಿಸುತ್ತದೆ? ತಮ್ಮೆಲ್ಲರದೂ ಒಂದೇ ಸಂಕಲ್ಪ, ಒಂದೇ ಸಮಯದಲ್ಲಿ ಉತ್ಪನ್ನವಾಗಲಿ, ಇಷ್ಟೊಂದು ಶಕ್ತಿಶಾಲಿ ತಪಸ್ಸಿನ ಶ್ರೇಷ್ಠ ಸ್ಥಿತಿ ಇರಲಿ, ಪರಿವರ್ತನೆ ಮತ್ತು ಪ್ರಕೃತಿ ಪ್ರತ್ಯಕ್ಷವಾಗಿ ನಿಮ್ಮ ಮುಂದೆ ಬರಬೇಕೆಂದು ಸೆಕೆಂಡಿನ ಸಂಕಲ್ಪ ಮಾಡಿ. ಹೇಗೆ ತಾವು ಬ್ರಾಹ್ಮಣ ಆತ್ಮರು ವಿಶ್ವದ ಸರ್ವ ಆತ್ಮರಿಗಾಗಿ ಒಂದೇ ಸಮಯದಲ್ಲಿ ವಿಶ್ವ ಶಾಂತಿಗಾಗಿ ಯೋಗವನ್ನು**

**ಮಾಡುತ್ತೀರಲ್ಲವೇ. ಅಂದಾಗ ಎಲ್ಲರದು ಒಂದೇ ಸಮಯದಲ್ಲಿ ಒಂದೇ ಸಂಕಲ್ಪದ ಸ್ಮೃತಿ ಚಿಹ್ನೆಯು ಉಳಿಯುತ್ತದೆ.** ಹಾಗೆಯೇ ಸರ್ವರ ಒಂದೇ ಸಂಕಲ್ಪದಿಂದ ಪ್ರಕೃತಿ ಉಪದ್ರವದ ನರ್ತನೆಯನ್ನು ಪ್ರಾರಂಭಿಸುತ್ತದೆ. ಆದ್ದರಿಂದಲೇ ಸ್ವ ಪರಿವರ್ತನೆಯಿಂದ ವಿಶ್ವ ಪರಿವರ್ತನೆ ಎಂದು ಹೇಳುತ್ತೀರಿ. ಅಂದಾಗ ಈ ಹಳೆಯ ಪ್ರಪಂಚ ಹೊಸ ಪ್ರಪಂಚವಾಗಿ ಹೇಗೆ ಪರಿವರ್ತನೆಯಾಗುತ್ತದೆ? ತಮ್ಮೆಲ್ಲರ ಶಕ್ತಿಶಾಲಿ ಸಂಕಲ್ಪದಿಂದ, ಸಂಘಟಿತ ರೂಪದಿಂದ ಯಾವಾಗ ಎಲ್ಲರದೂ ಒಂದೇ ಸಂಕಲ್ಪ ಉತ್ಪನ್ನವಾಗುತ್ತದೆಯೋ ಆಗ ಪರಿವರ್ತನೆಯಾಗುತ್ತದೆ. ಏನು ಮಾಡಬೇಕೆಂಬುದು ತಿಳಿಯಿತೇ? ಇದಕ್ಕೆ ತಪಸ್ಸು ಎಂದು ಕರೆಯಲಾಗುತ್ತದೆ. ಒಳ್ಳೆಯದು.

ಬಾಪ್‌ದಾದಾರವರು ಡಬಲ್ ವಿದೇಶಿ ಮಕ್ಕಳನ್ನು ನೋಡಿ ಸದಾ ಹರ್ಷಿತರಾಗುತ್ತಾರೆ. ಭಾರತವಾಸಿಗಳನ್ನು ನೋಡಿ ಹರ್ಷಿತರಾಗುವುದಿಲ್ಲ ಎಂದಲ್ಲ. ಈಗ ಡಬಲ್ ವಿದೇಶಿಗಳ ಸರದಿ ಆಗಿರುವ ಕಾರಣ ಈ ರೀತಿ ಹೇಳುತ್ತಿದ್ದಾರೆ. ಭಾರತದ ಮೇಲೆ ತಂದೆ ಸದಾ ಪ್ರಸನ್ನವಾಗಿಯೇ ಇದ್ದಾರೆ. ಆದ್ದರಿಂದಲೇ ಭಾರತದಲ್ಲಿ ಬಂದಿರುವುದು. ಮತ್ತು ಬಂದಿರುವ ತಮ್ಮೆಲ್ಲರನ್ನೂ ಸಹ ಭಾರತವಾಸಿಯರನ್ನಾಗಿ ಮಾಡಲಾಗಿದೆ. ಈ ಸಮಯದಲ್ಲಿ ತಾವೆಲ್ಲರೂ ವಿದೇಶಿಗಳೋ ಅಥವಾ ಭಾರತವಾಸಿಗಳೋ? ಭಾರತವಾಸಿಗಳಲ್ಲೂ ಸಹ ಮಧುಬನ ನಿವಾಸಿಗಳು. ಮಧುಬನ ನಿವಾಸಿಗಳಾಗುವುದು ಇಷ್ಟವಾಗುತ್ತದೆಯಲ್ಲವೇ? ಈಗ ಬೇಗ-ಬೇಗ ಸೇವೆಯನ್ನು ಪೂರ್ಣ ಮಾಡಿದ್ದೆ ಆದರೆ ಮಧುಬನ ನಿವಾಸಿಗಳು ಆಗಿಯೇ ಬಿಡುತ್ತೀರಿ. ಇಡೀ ವಿಶ್ವದಲ್ಲಿ ಆದಷ್ಟು ಬೇಗ ಸಂದೇಶವನ್ನು ನೀಡುವುದು ಪೂರ್ಣ ಮಾಡಿ. ನಂತರ ಇಲ್ಲಿಗೆ ಬನ್ನಿ ಆಗ ನಿಮ್ಮನ್ನು ಕಳುಹಿಸುವುದಿಲ್ಲ. ಅದುವರೆಗೂ ಸ್ಥಾನವೂ ಸಿದ್ಧವಾಗುತ್ತದೆ. ನೋಡಿ ಮೈದಾನವಂತೂ ಉದ್ದ-ಅಗಲವಾಗಿದೆ (ಪೀಸ್ ಪಾರ್ಕ್) ಅಲ್ಲಿ ಮೊದಲೇ ತಮ್ಮೆಲ್ಲರಿಗೂ ವ್ಯವಸ್ಥೆ ಮಾಡಲಾಗುತ್ತದೆ. ಆ ನಂತರ ತಮಗೆ ತೊಂದರೆ ಆಗುವುದಿಲ್ಲ. ಯಾವಾಗ ಅಂತಹ ಸಮಯ ಬರುತ್ತದೆಯೋ ಆ ಸಮಯದಲ್ಲಿ ತಮ್ಮ ಬಟ್ಟೆಯ ಪೆಟ್ಟಿಗೆ ಮೇಲೆ ಮಲಗಿಕೊಳ್ಳಬೇಕಾಗುತ್ತದೆ. ಮಂಚಗಳು ಇರುವುದಿಲ್ಲ. ಆ ಸಮಯವೇ ಬೇರೆಯಾಗಿರುತ್ತದೆ. ಈ ಸಮಯವೇ ಬೇರೆಯಾಗಿದೆ. ಈಗ ಸೇವೆಯ ಒಂದೇ ಸಮಯದಲ್ಲಿ ಮನಸಾ-ವಾಚಾ-ಕರ್ಮಣಾ ಒಟ್ಟಿಗೆ ಸಂಕಲ್ಪ ಒಂದೇ ಇರಲಿ, ಆಗ ಸೇವೆಯು ತೀವ್ರವಾಗಿ ಮುಂದುವರೆಯುತ್ತದೆ. ಮನಸ್ಸಿನ ಮೂಲಕ ಶಕ್ತಿಶಾಲಿ, ಮಾತಿನ ಮೂಲಕ ಜ್ಞಾನಪೂರ್ಣ, ಸಂಬಂಧ-ಸಂಪರ್ಕ ಅರ್ಥಾತ್ ಕರ್ಮದ ಮೂಲಕ ಪ್ರೇಮ ಪೂರ್ಣ, ಈ ಮೂರೂ ಅನುಭವಗಳು ಒಂದೇ ಸಮಯದಲ್ಲಿ ಒಟ್ಟಿಗೆ ನಡೆಯಲಿ, ಇದನ್ನೇ ತೀವ್ರ ವೇಗವಂತ ಸೇವೆ ಎಂದು ಕರೆಯುತ್ತಾರೆ ಒಳ್ಳೆಯದು.

ತನುವಿನಿಂದ, ಮನಸ್ಸಿನಿಂದ ಚೆನ್ನಾಗಿದ್ದೀರಾ, ದೂರದಿಂದ ಬರುವ ಮಕ್ಕಳನ್ನು ನೋಡಿ ಬಾಪ್‌ದಾದಾ ಕೂಡ ಸಂತೋಷಿಸುತ್ತಿದ್ದಾರೆ. ದೂರದಿಂದ ಬರುವವರು ಒಳ್ಳೆಯವರು, ಏಕೆಂದರೆ ವಿಮಾನದಲ್ಲಿ ಬರುತ್ತಾರೆ. ಈ ಕಲ್ಪದಲ್ಲಿ ಯಾರಾದರೆ ಮೊದಲ ಬಾರಿ ಬಂದಿರುವಿರೋ ಅವರಿಗೆ ಬಾಪ್‌ದಾದಾ ವಿಶೇಷ ಪ್ರಿಯಸ್ಮೃತಿಯನ್ನು ಕೊಡುತ್ತಿದ್ದಾರೆ. ಒಳ್ಳೆಯ ಧೈರ್ಯವಿರುವ ಮಕ್ಕಳಿದ್ದಾರೆ, ಇಲ್ಲಿಂದ ಹೋಗುತ್ತಲೇ ಮತ್ತೆ ಟಿಕೆಟ್ಟಿಗಾಗಿ ಹಣವನ್ನು ಜಮಾ ಮಾಡಿಕೊಂಡು ಮತ್ತೆ ಬರುತ್ತಾರೆ. ಸ್ಮೃತಿಗಾಗಿ ಇದು ಕೂಡ ಒಂದು ವಿಧಿ ಹೋಗಬೇಕು, ಹೋಗಬೇಕು, ಹೋಗಬೇಕು.... ಎಂದುಕೊಳ್ಳುತ್ತಾರೆ, ಇಲ್ಲಿಗೆ ಬಂದರೆ ವಿದೇಶಕ್ಕೆ ಹೋಗಬೇಕು ಎನ್ನುತ್ತಾರೆ ಮತ್ತೆ ಹೋದ ನಂತರ ಬರಬೇಕೆಂದು ಯೋಚಿಸುತ್ತಾರೆ ಅಬುಗೆ ಶೋಭೆ ಈ ಬ್ರಾಹ್ಮಣಾತ್ಮರಿಂದಲೇ ಎಂದು ಗವರ್ನಮೆಂಟ್ ಅವರು ಕೂಡ ಅರ್ಥ ಮಾಡಿಕೊಳ್ಳುವ ಸಮಯ ಬರುತ್ತದೆ ಒಳ್ಳೆಯದು.

**ನಾಲ್ಕಾರು ಕಡೆಯ ಸರ್ವ ಮಹಾನ್ ಸಂತುಷ್ಟ ಆತ್ಮರಿಗೆ, ಸದಾ ಪ್ರಸನ್ನಚಿತ್ತ ನಿಶ್ಚಿಂತವಾಗಿರುವ ಶ್ರೇಷ್ಠ ಆತ್ಮರಿಗೆ, ಸದಾ ಒಂದೇ ಸಮಯದಲ್ಲಿ ಮೂರೂ ಸೇವೆಗಳನ್ನು ಮಾಡುವಂತಹ ತೀವ್ರಗತಿಯಿಂದ ಸೇವೆ ಮಾಡುವ ಸೇವಾಧಾರಿ ಆತ್ಮರಿಗೆ, ಸದಾ ಶ್ರೇಷ್ಠ ಸ್ಥಿತಿಯ ಆಸನಧಾರಿ ತಪಸ್ವಿ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಪಾರ್ಟಿಯೊಂದಿಗೆ ಅವ್ಯಕ್ತ ಬಾಪ್‌ದಾದಾರವರ ವಾರ್ತಾಲಾಪ.**

ಎಲ್ಲರೂ ತಮ್ಮನ್ನು ಪವಿತ್ರ ಹಂಸಗಳೆಂದು ತಿಳಿಯುವಿರಾ! ಪವಿತ್ರ ಹಂಸದ ವಿಶೇಷ ಕರ್ಮವೇನಾಗಿದೆ? (ಪ್ರತಿಯೊಬ್ಬರೂ ತಿಳಿಸಿದರು) ಯಾವ ವಿಶೇಷತೆಗಳನ್ನು ತಿಳಿಸಲಾಗಿದೆಯೋ ಅದು ಪ್ರತ್ಯಕ್ಷ ಕರ್ಮದಲ್ಲಿ ಬರುತ್ತದೆಯೇ? ಏಕೆಂದರೆ ತಾವು ಬ್ರಾಹ್ಮಣರಲ್ಲದೆ ಮತ್ತಾರು ಪವಿತ್ರ ಹಂಸಗಳಾಗಲು ಸಾಧ್ಯ? ಆದ್ದರಿಂದ ನಶೆಯಿಂದ ಹೇಳಿರಿ. ಹೇಗೆ ತಂದೆಯು ಸದಾ ಪವಿತ್ರತೆಯ ಸಾಗರನಾಗಿದ್ದಾರೆಯೋ, ಸದಾ ಸರ್ವಶಕ್ತಿಗಳನ್ನು ಕರ್ಮದಲ್ಲಿ ತರುತ್ತಾರೆಯೋ ಹಾಗೆಯೇ ತಾವು ಪವಿತ್ರ ಹಂಸಗಳೂ ಸಹ ಸರ್ವಶಕ್ತಿಗಳನ್ನು ಪ್ರತ್ಯಕ್ಷದಲ್ಲಿ ತರುವವರು ಹಾಗೂ ಸದಾ ಪವಿತ್ರವಾಗಿದ್ದೀರಿ. ಅದೇರೀತಿ ಇದ್ದಿರಿ ಹಾಗೂ ಸದಾ ಇರುತ್ತೀರಿ. ಮೂರೂ ಕಾಲಗಳ ನೆನಪಿದೆಯಲ್ಲವೇ? ಮಕ್ಕಳು ಅನೇಕಬಾರಿ ಪಾತ್ರವನ್ನಭಿನಯಿಸಿರುವುದನ್ನು ಬಾಪ್‌ದಾದಾರವರು ನೋಡುತ್ತಾ ಹರ್ಷಿತವಾಗುತ್ತಾರೆ. ಆದ್ದರಿಂದ ಕಷ್ಟವೆನಿಸುವುದಿಲ್ಲ ಅಲ್ಲವೆ. ಮಾಸ್ಟರ್ ಸರ್ವಶಕ್ತಿವಂತನ ಮುಂದೆ ಕಷ್ಟವೆನ್ನುವ ಶಬ್ದವೆಂದಿಗೂ. ಯಸ್ವಪ್ನದಲ್ಲಿಯೂ ಬರಲು ಸಾಧ್ಯವಿಲ್ಲ. ಬ್ರಾಹ್ಮಣ ಶಬ್ಧಕೋಶದಲ್ಲಿ ಕಷ್ಟವೆನ್ನುವ ಪದವಿದೆಯೇ? ಎಲ್ಲಾದರೂ ಚಿಕ್ಕ ಅಕ್ಷರಗಳಲ್ಲಾದರೂ ಇಲ್ಲವಲ್ಲವೇ? ಮಾಯೆಯ ಬಗ್ಗೆ ಅರಿವುಂಟಾಗಿದೆ ಅಲ್ಲವೇ? ಎಲ್ಲಿ ಫುಲ್‌ಆಗಿದೆಯೋ ಅಲ್ಲಿ ಫೇಲಾಗಲು ಸಾಧ್ಯವಿಲ್ಲ. ಫೇಲಾಗುವುದರ ಕಾರಣವೇನು? ಎಲ್ಲದರ ತಿಳುವಳಿಕೆಯಿದ್ದರೂ ಅನುತ್ತೀರ್ಣರಾಗುವುದು ಏಕೆ? ಒಂದುವೇಳೆ ಎಲ್ಲವೂ ಗೊತ್ತಿದ್ದರೂ ಅನುತ್ತೀರ್ಣರಾದರೆ ಏನೆಂದು ಹೇಳುವುದು? ಯಾವುದೇ ಸಂದರ್ಭವಿದೆಯೆಂದರೆ, ಅದರಲ್ಲಿ ಅನುತ್ತೀರ್ಣರಾಗಲು ಕಾರಣವಾಗಿದೆ- ಯಾವುದಾದರೊಂದು ಮಾತಿನಲ್ಲಿ ಬೇಸರವಾಗಿಬಿಡುತ್ತೀರಿ. ಬೇಸರವು ರೋಗವನ್ನುಂಟು ಮಾಡುತ್ತದೆ. ಮತ್ತು ಅದೇನು ಮಾಡುತ್ತದೆಯೆಂದು ಗೊತ್ತಿದೆಯೇ? ಬಲಹೀನರನ್ನಾಗಿ ಮಾಡಿಬಿಡುತ್ತದೆ. ಬಲಹೀನತೆಯಿಂದ ಚಿಕ್ಕ ಮಾತೂ ಸಹ ದೊಡ್ಡದಾಗಿಬಿಡುತ್ತದೆ ಆದ್ದರಿಂದ ಈಗ ಸಂಪೂರ್ಣರಾಗಿರಿ. ಫೇಲ್ ಆಗಬಾರದು, ಪಾಸ್ ಆಗಬೇಕು. ಯಾವುದೆ ಮಾತಿರಲಿ, ಅದನ್ನು ಪಾಸ್ ಮಾಡುತ್ತಾ ಸಾಗುತ್ತೀರೆಂದರೆ ಪಾಸ್-ವಿತ್-ಆನರ್ ಆಗಿಬಿಡುತ್ತೀರಿ. ಅಂದಮೇಲೆ ಪಾಸ್ ಮಾಡಬೇಕು, ಪಾಸ್ ಆಗಬೇಕು ಮತ್ತು ಪಾಸ್ ಇರಬೇಕು(ಸಮೀಪ). ಬಾಪ್‌ದಾದಾರವರೊಂದಿಗೆ ಎಷ್ಟು ಪ್ರೀತಿಯಿದೆಯೋ ಅಷ್ಟು ಮತ್ತಾರೊಂದಿಗೂ ಇಲ್ಲ ಎಂದು ನಶೆಯಿಂದ ಹೇಳುತ್ತೀರಿ ಅಂದಮೇಲೆ ಯಾವಾಗ ಪ್ರೀತಿಯಿದೆಯೆಂದರೆ ಸಮೀಪವಿರಬೇಕೇ ಅಥವಾ ದೂರವಿರಬೇಕಾ? ಹಾಗಾದರೆ ಸಮೀಪವಿರಬೇಕು ಹಾಗೂ ಉತ್ತೀರ್ಣರಾಗಬೇಕು. ಯು. ಕೆ.ಯವರಂತು ಬಾಪ್‌ದಾದಾರವರ ಸರ್ವ ಆಶೆಗಳನ್ನು ಪೂರ್ಣಗೊಳಿಸುವವರು ಆಗಿದ್ದೀರಲ್ಲವೆ. ಎಲ್ಲದಕ್ಕಿಂತ ನಂಬರ್‌ವನ್ ತಂದೆಯವರ ಶುಭ ಆಶೆಯು ಯಾವುದಾಗಿದೆ? ವಿಶೇಷವಾಗಿ ಯು. ಕೆ.ಯವರಿಗಾಗಿ ಹೇಳುತ್ತಿದ್ದೇವೆ. ಬಹಳ ಗಣ್ಯವ್ಯಕ್ತಿಯನ್ನು ಕರೆತರಬೇಕಾಗಿದೆ. ತಂದೆಯನ್ನು ಪ್ರತ್ಯಕ್ಷ ಮಾಡಲು ಯಾರು ನಿಮಿತ್ತರಾಗುವವರು ಹಾಗೂ ತಂದೆಯ ಸಮೀಪದಲ್ಲಿ ಬರುತ್ತಾರೆಯೋ ಅಂತಹ ಗಣ್ಯವ್ಯಕ್ತಿಯನ್ನು ಕರೆತರಬೇಕಾಗಿದೆ. ಈಗ ಯು.ಕೆ.ಯಲ್ಲಿ, ಅಮೇರಿಕಾದಲ್ಲಿ, ಇನ್ನೂ ವಿದೇಶದ ದೇಶಗಳಿಂದ ಅವಶ್ಯವಾಗಿ ಗಣ್ಯವ್ಯಕ್ತಿಗಳು ಬಂದಿದ್ದಾರೆ ಆದರೆ ಒಂದು- ಸಹಯೋಗಿ ಮತ್ತು ಇನ್ನೊಂದು ಪ್ರಕಾರದವರು- ಸಹಯೋಗಿ, ಸಮೀಪದಲ್ಲಿರುವವರು. ಇಂತಹ ಮೈಕ್/ಗಣ್ಯವ್ಯಕ್ತಿಯನ್ನು ತಯಾರು ಮಾಡಿರಿ. ಹಾಗೆಯೇ ಸೇವೆಯಲ್ಲಿಯೂ ಬಹಳಚೆನ್ನಾಗಿ ವೃದ್ಧಿಯಾಗುತ್ತಿದೆ, ಆಗುತ್ತಿರುತ್ತದೆ. ಒಳ್ಳೆಯದು- ರಷ್ಯಾದವರು ಚಿಕ್ಕ ಮಕ್ಕಳಿದ್ದಾರೆ ಆದರೆ ಅದೃಷ್ಟವಂತರು. ತಮಗೆ ತಂದೆಯೊಂದಿಗೆ ಅಪಾರ ಪ್ರೀತಿಯಿದೆ! ಬಾಪ್‌ದಾದಾರವರೂ ಸಹ ಮಕ್ಕಳ ಸಾಹಸದಲ್ಲಿ ಖುಷಿಯಿದ್ದಾರೆ. ಒಳ್ಳೆಯದು- ಈಗ ಪರಿಶ್ರಮವನ್ನು ಮರೆತಿದ್ದೀರಲ್ಲವೆ. ಒಳ್ಳೆಯದು-

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 17-03-1991.

***ಸಂತುಷ್ಟ ಮಣಿಯ ಶ್ರೇಷ್ಠ ಆಸನದ ಮೇಲೆ ಆಸೀನರಾಗಲು ಪ್ರಸನ್ನ ಚಿತ್ತರಾಗಿ, ನಿಶ್ಚಿಂತ ಆತ್ಮರಾಗಿ ತಯಾರಾಗಿರಿ.***

ಸಂತುಷ್ಟತೆಗೆ ಆಧಾರ ತಂದೆಯಿಂದ ಲಭಿಸಿರುವ ಸರ್ವಪ್ರಾಪ್ತಿಗಳಿಂದ ಸಂತುಷ್ಟತೆ ಅರ್ಥಾತ್ ಭರ್ ಪೂರ್ ಆಗಿ ಇರುವುದು. ಅಸಂತುಷ್ಟತೆಗೆ ಕಾರಣ ಅಪ್ರಾಪ್ತಿ. ಸಂತುಷ್ಟತೆಗೆ ಕಾರಣ ಸರ್ವಪ್ರಾಪ್ತಿಗಳು, ಅಂತಯೇ ಜನ್ಮದಿಂದಲೇ ಎಲ್ಲರಿಗೂ ಪೂರ್ಣ ವಾರಸತ್ವವನ್ನು (ಆಸ್ತಿ) ಬ್ರಾಹ್ಮಣ ಮಕ್ಕಳಾದ ನಿಮಗೆ ಬಾಪ್‌ದಾದಾ ಕೊಟ್ಟಿದ್ದಾರೆ. ಸ್ವಯಂನಿಂದ ಸಂತುಷ್ಟತೆ ಅರ್ಥಾತ್ ಸ್ವಯಂನ ಪುರುಷಾರ್ಥದಿಂದ, ಸ್ವಯಂನ ಸಂಸ್ಕಾರಗಳ ಪರಿವರ್ತನೆಯ ಪುರುಷಾರ್ಥದಲ್ಲಿ, ಸ್ವಪುರುಷಾರ್ಥದ ಪರ್ಸಂಟೇಜ್ ನಲ್ಲಿ, ಸ್ಥಿತಿಯಲ್ಲಿ ಸದಾ ಸಂತುಷ್ಟವಾಗಿ ಇರುವುದು. ಸೇವೆಯಲ್ಲಿ ಸದಾ ಸಂತುಷ್ಟತೆ ಅರ್ಥಾತ್ ಸ್ವಯಂನ ಮನಸಾ, ವಾಚಾ, ಕರ್ಮಣಾದಿಂದ ಎಂದರೆ ಸಂಬಂಧ ಸಂಪರ್ಕಗಳಿಂದ ಒಂದೇ ಸೇವೆಯಲ್ಲಿ ಅಲ್ಲ, ಮೂರು ಸೇವೆಗಳಲ್ಲಿ ಸಂತುಷ್ಟವಾಗಿ ಇರುವುದು. ಮತ್ತು ಸರ್ವ ಆತ್ಮರ ಸಂಬಂಧ ಸಂಪರ್ಕಗಳಲ್ಲಿ ಸ್ವಯಂನಿಂದ ಮತ್ತು ಸರ್ವರಿಂದ ಸದಾ ಸಂತುಷ್ಟವಾಗಿ ಇರಬೇಕು. ಸಂತುಷ್ಟ ಆತ್ಮನ ಲಕ್ಷಣಗಳು - ಮನಸ್ಸು ಸದಾ ಪ್ರಸನ್ನವಾಗಿ ಇರಬೇಕು. ವ್ಯಕ್ತಿತ್ವವಿರಬೇಕು, ಸ್ವಯಂಗೆ ಸ್ವಯಂ ವ್ಯಕ್ತಿತ್ವದಲ್ಲಿ ಇರುವಂತೆ ಭಾವಿಸುತಿದ್ದೀರಿ, ಆದರೆ ಇತರರು ಹಾಗೆ ತಿಳಿಯುವುದಿಲ್ಲವೆಂದರೆ ಅದನ್ನೇ ಅಮಾಯಕವಾಗಿ ಸಂತುಷ್ಟವಾಗಿದ್ದೇವೆ ಎಂದು ಭಾವಿಸುವುದು ಎನ್ನುತ್ತಾರೆ. ಸಂತುಷ್ಟತೆ ಅರ್ಥಾತ್ ಮನಸ್ಸು, ಬುದ್ಧಿ ಸದಾ ವಿಶ್ರಾಂತಿಯಿಂದ ಇರುತ್ತವೆ, ಸುಖಶಾಂತಿಯ ಸ್ಥಿತಿಯಲ್ಲಿ ಇರುತ್ತದೆ. ದುಃಖದಲ್ಲಿ ಇರುವುದಿಲ್ಲ & ಸರ್ವಾತ್ಮರಿಂದ ಸ್ವತಹವಾಗಿ ಆಶೀರ್ವಾದಗಳನ್ನು ಪಡೆಯುತ್ತಿರುತ್ತಾರೆ. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಯಿಂದ ಲಭಿಸಿರುವ ಸರ್ವಪ್ರಾಪ್ತಿಗಳನ್ನು ಪಡೆದು ಸಂತುಷ್ಟವಾಗಿ ಇದ್ದೇನೆ. (ಸರ್ವ ಶಕ್ತಿಗಳು, ಸರ್ವ ಗುಣಗಳು, ಸರ್ವಜ್ಞಾನ, ವಾರಸತ್ವ ಅರ್ಥಾತ್ ಸಂಪನ್ನತೆ.)

2. ನಾನು ತಂದೆಯಿಂದ ಪೂರ್ಣ ವಾರಸತ್ವವನ್ನು ಪಡೆದು ಸಂಪನ್ನವಾಗಿ, ಸಂಪೂರ್ಣವಾಗಿರುವ ಸಂತುಷ್ಟ ಸ್ವರೂಪ.

3. ನಾನು ಸಂತುಷ್ಟತೆಯ ವ್ಯಕ್ತಿತ್ವದಿಂದ ಈ ಬ್ರಾಹ್ಮಣ ಜೀವನವನ್ನು ಸದಾ ಮಜಾ ಮತ್ತು ಮೋಜಿನಿಂದ ಕಳೆದಿದ್ದೇನೆ.

4. ನಾನು ಸ್ವಯಂನ ಬಗ್ಗೆ ಅಥವಾ ಇತರರ ಬಗ್ಗೆ ಯಾವ ಪ್ರಶ್ನೆ ಬಂದರೂ ಸಾರದಲ್ಲಿ ಇರುತ್ತಾ ಬಿಂದುವಿಟ್ಟು ನಿಶ್ಚಿಂತವಾಗಿರುವ ಪ್ರಸನ್ನ ಚಿತ್ತ ಸ್ವರೂಪ.

5. ನಾನು ಸ್ವಯಂನ ಪುರುಷಾರ್ಥದಿಂದ, ಸಂಸ್ಕಾರಗಳ ಪರಿವರ್ತನೆಯ ಪುರುಷಾರ್ಥದಿಂದ, ಸ್ವಪುರುಷಾರ್ಥದ ಪರ್ಸಂಟೇಜ್ ನಿಂದ, ಸ್ಥಿತಿಯಿಂದ ಸದಾ ಸಂತುಷ್ಟವಾಗಿ ಇದ್ದೇನೆ.

6. ನಾನು ಮನಸಾ, ವಾಚಾ, ಕರ್ಮಣಾ (ಸಂಬಂಧ ಸಂಪರ್ಕ) ಸೇವೆಯಲ್ಲಿ ಸದಾ ಸಂತುಷ್ಟವಾಗಿ ಇದ್ದೇನೆ.

7. ನಾನು ಸರ್ವ ಆತ್ಮರ ಸಂಬಂಧ- ಸಂಪರ್ಕದಲ್ಲಿ, ಸ್ವಯಂನಿಂದ ಮತ್ತು ಇತರರಿಂದ ಸದಾ ಸಂತುಷ್ಟವಾಗಿ ಇದ್ದೇನೆ.

8. ನಾನು ಯಥಾರ್ಥ ಸಂತುಷ್ಟತೆಯ ಅನುಭವದಿಂದ ಮನಸ್ಸು, ಬುದ್ಧಿಯನ್ನು ವಿಶ್ರಾಂತಿಯಾಗಿ, ಸುಖದ ಸ್ಥಿತಿಯಲ್ಲಿ ಇರುವ ಬಾಪ್‌ದಾದಾರವರ ಮಸ್ತಕದಮಣಿ.

9. ನಾನು ಸ್ವತಃವಾಗಿ ಆಶೀರ್ವಾದಗಳನ್ನು ಪಡೆದಿರುವ ಆತ್ಮಿಕ ಮತ್ತು ಅವಿನಾಶಿ ಸಿದ್ಧಿ ಸ್ವರೂಪ & ತಪಸ್ವಿ.

10. ನಾನು ಸರ್ವಪ್ರಾಪ್ತಿಗಳನ್ನು ಮನಸ್ಸು, ಬುದ್ಧಿ, ನಡವಳಿಕೆ, ಚಹರೆ, ಸಂಬಂಧ ಸಂಪರ್ಕಗಳಲ್ಲಿ ತಂದು ವಿಶ್ವವೇದಿಕೆಯ ಮೇಲೆ ಪ್ರತ್ಯಕ್ಷವಾಗಿ, ಪ್ರತ್ಯಕ್ಷತೆಯ ನಗಾರಿಯನ್ನು ಮೊಳಗಿಸಿದ್ದೇನೆ.

11. ತಪಸ್ವಿಯಾದ ನನ್ನ ಸಂಪೂರ್ಣ ಸ್ಥಿತಿ & ವಿಶ್ವ ಪರಿವರ್ತನೆಯ ಸಂಕಲ್ಪದಿಂದ ಪ್ರಕೃತಿಯು ಕೂಡ ಸಂಪೂರ್ಣ ಉಪದ್ರವದ ನಾಟ್ಯ ಮಾಡಿದೆ.

12. ನನ್ನ ಸಹಯೋಗಿ - ಮನಸ್ಸು, ಬುದ್ಧಿ ಸಂಸ್ಕಾರಗಳನ್ನು ನನ್ನ ಆಜ್ಞೆಯ ಪ್ರಕಾರ ನಡೆಸಿರುವ ಕಾರಣ ಪ್ರಕೃತಿಯು ನನ್ನ ಸಂಕಲ್ಪದ ಆಜ್ಞೆಯನ್ನು ಅಂಗೀಕರಿಸಿದೆ.

13. ಸರ್ವ ಬ್ರಾಹ್ಮಣ ಆತ್ಮರೆಲ್ಲರಿಗೂ ಒಂದೇ ಸಮಯದಲ್ಲಿ ಪರಿವರ್ತನೆ ಎಂಬ ಸಂಕಲ್ಪ ಬಂದಿರುವುದರಿಂದ ಪ್ರಕೃತಿ ಹಾಜರಾಗಿದೆ.

14. ನಾನು ಮನಸ್ಸಿನಿಂದ ಶಕ್ತಿಶಾಲಿ, ಮಾತಿನಿಂದ ಜ್ಞಾನ ಸ್ವರೂಪ, ಸಂಬಂಧ ಸಂಪರ್ಕ ಅರ್ಥಾತ್ ಕರ್ಮದಿಂದ ಪ್ರೇಮ ಸ್ವರೂಪವಾಗಿ ಇರುತ್ತಾ ತೀವ್ರ ವೇಗಯುಕ್ತವಾದ ಸೇವೆಯನ್ನು ಮಾಡಿದ್ದೇನೆ.